ದಿನಾಂಕ: 25.07.2023
ಅಸಲು ದಾವೆ ಃ 58/2019
ಡಿ.ಡಬ್ಲ್ಯೂ.1

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಎನ್.ಪಿ. ರವರಿಂದಃ</u>**

ನನಗೆ ಒಬ್ಬ ತಮ್ಮ ಪ್ರದೀಪ ಇದ್ದಾನೆ . ನಾನು B.Sc., Computer Science ಓದಿದ್ದು ಖಾಸಗಿ ಕಂಪನಿಯಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಹೊಸಕೆರೆಯಲ್ಲಿ ವಾಸವಾಗಿರುತ್ತೇನೆ. ನನ್ನ ತಂದೆ ತಾಯಿ ನನ್ನ ಜೊತೆ ವಾಸವಾಗಿರುತ್ತಾರೆ. ನಾವೆಲ್ಲರೂ ಹೊಸಕೆರೆಯಲ್ಲಿ ವಾಸವಾಗಿರುತ್ತೇವೆ. ಯಾವುದೇ ನೋಟೀಸ್ ಬಂದರು ಹೊಸಕೆರೆ ವಿಳಾಸಕ್ಕೆ ಬರುತ್ತದೆ ಎಂದರೆ ಸರಿ. ನನ್ನ ತಾಯಿ 2 ನೇ ತರಗತಿವರೆಗೂ ಓದಿರುತ್ತಾರೆ. ಅವರು ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ. ಸಾಕ್ಷಿಗೆ ನಿಪಿ.6 ದಾಖಲೆ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ , ಅದು ನನ್ನ ಸಹಿ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. 2019 ರಲ್ಲಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ನೋಟೀಸ್ ಬಂದಾಗ ನನ್ನ ತಾಯಿಗೆ ನೋಟೀಸ್ ಬಂದಿರುತ್ತದೆ ಎಂದರೆ ಸರಿ. ನನ್ನ ತಾಯಿಯವರು ಸದರಿ ನೋಟೀಸ್ ಗೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಅವರು ಹಾಕಿದ ಹೆಬ್ಬೆಟ್ಟಿನ ಗುರುತನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಸಾಕ್ಷಿಗೆ ನಿಪಿ.3 ನೋಟೀಸನ್ನು ತೋರಿಸಲಾಗಿ ನಮಗೆ ಬಂದಿರುವ ನೋಟೀಸ್ ಅದೇ ಎಂದು ಗುರುತಿಸಿರುತ್ತಾರೆ. ಸದರಿ ನೋಟೀಸನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ನೋಟೀಸ್ ವಾದಿಯಿಂದ ಬಂದಿರುತ್ತದೆ. ನೋಟೀಸ್ ಬಂದ ನಂತರ ವಾದಿಯನ್ನು ಬೇಟಿ ಮಾಡಿರುತ್ತೀರಾ ಎಂದರೆ ಬೇಟಿ ಮಾಡಿರುವುದಿಲ್ಲ. ಸದರಿ ನೋಟೀಸ್ ಗೆ ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಸದರಿ ನೋಟೀಸ್ ಗೆ ಉತ್ತರ ಕೊಡಲು ತೊಂದರೆ ಇರಲಿಲ್ಲ. ದಾವಾ ಆಸ್ತಿಯನ್ನು 1 ನೇಪ್ರತಿವಾದಿ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿ 18 ಗುಂಟೆ ಇರುತ್ತದೆ. ಅದು ಸರ್ವೆ ನಂಬರ್ 374/2 ರಲ್ಲಿ ಹೊಸಕೆರೆ ಗ್ರಾಮದಲ್ಲಿ ಇದೆ. ಸದರಿ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಃ ಕೆ.ತಾಯಮ್ಮ, ಪಶ್ಚಿಮಕ್ಕೆಃ ಸರಸಮ್ಮ, ಉತ್ತರಕ್ಕೆ ಃ ನಿರಂಜನ ಅವರ ಜಮೀನು ದಕ್ಷಿಣಕ್ಕೆಃ ಭದ್ರಮ್ಮ ಮತ್ತು

ಅಂಕೇಗೌಡರವರ ಜಮೀನು. ದಕ್ಷಿಣಕ್ಕೆ ಕಾಲುವೆ ಇರುವುದಿಲ್ಲವಾ ಎಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ . ದಕ್ಷಿಣಕ್ಕೆ ಕಾಲುವೆ ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಭದ್ರಮ್ಮ ಮತ್ತು ಅಂಕೇಗೌಡ ಅವರ ಜಮೀನು ಇರುವ ಬಗ್ಗೆ ದಾಖಲೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಸರಸಮ್ಮ ಅವರ ಮಗ ಮಧು ಎಂದರೆ ಸರಿಯಲ್ಲ. ನಾನು ಒಂದು ಟ್ರ್ಯಾಕ್ಟರ್ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಅದು ಮಹೇಂದ್ರ ಟ್ರ್ಯಾಕ್ಟರ್ ಆಗಿರುತ್ತದೆ. 2016 ರಲ್ಲಿ ಟ್ರ್ಯಾಕ್ಟರ್ ಖರೀದಿ ಮಾಡಿರುತ್ತೇನೆ. ಸದರಿ ಟ್ರ್ಯಾಕ್ಟರ್ ರೂ.7,10,000/- ಆಗಿರುತ್ತದೆ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ.

ದಾವಾ ಆಸ್ತಿ ಸೇರಿಸಿ ಒಟ್ಟು 2 ಮುಕ್ಕಾಲು ಎಕರೆ ಜಮೀನು ಇದೆ. ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ. ಸಾಕ್ಷಿಯು ಪುನಃ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದೆವು . ರಮೇಶ್ ಅವರಿಗೆ 18 ಗುಂಟೆ ಜಮೀನಿನಲ್ಲಿ ಬೆಳೆ ಬೆಳಯಲು ಅವಕಾಶ ಮಾಡಿಕೊಟ್ಟಿದ್ದು , ಅದರ ಆದಾಯ ನಾವು ತೆಗೆದುಕೊಂಡು ಅವರಿಗೆ ಕೂಲಿ ಕೊಡುತ್ತೇವೆ. ಉಳಿದಿದದನ್ನು ನನ್ನ ಸೋದರ ಮಾವ ಜಮೀನು ನೋಡಿಕೊಳ್ಳುತ್ತಿದ್ದಾರೆ. ನಮಗೆ ಸೋದರ ಮಾವ ವರ್ಷಕ್ಕೆ ರೂ.1,00,000/- ಕೊಡುತ್ತಾರೆ. ರಮೇಶ್ ಅವರಿಗೆ ಮತ್ತು ಸೋದರ ಮಾವ ಅವರಿಗೆ ಜಮೀನಿನಲ್ಲಿ ವ್ಯವಸಾಯ ಮಾಡಲು ಅವಕಾಶ ಮಾಡಿಕೊಟ್ಟಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಅವರುಗಳನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ನುಡಿಯಲು ತೊಂದರೆ ಇದೆಯಾ ಎಂದರೆ ಅವರು ಬರುವುದಿಲ್ಲ. ಜಮೀನನ್ನು ಗುತ್ತಿಗೆಗೆ ಕೊಟ್ಟಿರುವುದಿಲ್ಲ ಮತ್ತು ಜಮೀನಿನಲ್ಲಿ ಯಾವುದೇ ವ್ಯವಸಾಯ ಮಾಡುತ್ತಿಲ್ಲ ಹಾಗೂ ಯಾವುದೇ ಆದಾಯ ಜಮೀನಿನಿಂದ ಬರುವುದಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಖರೀದಿ ಮಾಡುವ ಸಲುವಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಮುಂದೆ ಬಂದು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದು ರೂ.3,00,000/- ಮುಂಗಡ ಹಣ ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.1 ದಾಖಲೆ ತೋರಿಸಲಾಗಿ , ಅದರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ನಾನು ಒಂದೇ ತರಹ ಸಹಿ ಮಾಡುತ್ತೇನೆ. ಸಾಕ್ಷಿಗೆ ವಕಾಲತ್ ಮತ್ತು ಲಿಖಿತ ಹೇಳಿಕೆ ತೋರಿಸಲಾಗಿ ಅದರಲ್ಲಿ ಇರುವ ಸಹಿಗಳು ಅವರದೇ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ.1 ರಲ್ಲಿ ಇರುವ ಸಹಿ ಮತ್ತು ವಕಾಲತ್ ಹಾಗೂ ಲಿಖಿತ ಹೇಳಿಕೆಯಲ್ಲಿ ಇರುವ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. 3 ದಾಖಲೆಗಳಲ್ಲಿ R ಅಕ್ಷರ ಹೊರತುಪಡಿಸಿ ಸಹಿ 3 ದಾಖಲೆಗಳಲ್ಲೂ ಒಂದೇ ಎಂದರೆ ಸರಿಯಲ್ಲ. ನಿಪಿ.1

ದಾಖಲೆಯನ್ನು ಬರೆದುಕೊಟ್ಟ ನಂತರ ವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಸಹಿಯನ್ನು R ಅಕ್ಷರ ಬರೆಯುವುದನ್ನು ವ್ಯತ್ಯಾಸ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2016-17 ರ ಪೂರ್ವದಲ್ಲಿ ದಾಖಲೆಗಳನ್ನು ಸಹಿ ಮಾಡಿರುತ್ತೇನೆ. ಚಿಕ್ಕತಾಯಮ್ಮ ಅವರಿಂದ ಹೊಸಕೆರೆ ಗ್ರಾಮದ ನಿವೇಶನ 2017-18 ರಲ್ಲಿ ಖರೀದಿ ಮಾಡಿರುತ್ತೇನೆ. ಬೇರೆ ಯಾವ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ತೋಟವನ್ನು ಬೋಗ್ಯಕ್ಕೆ ತೆಗೆದುಕೊಂಡಾಗ ಮತ್ತು ಕೆಲಸಕ್ಕೆ ಸೇರುವಾಗ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.